# ಡಾ. ಬಿ. ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ






## ಸ್ವಯಂ ಉದ್ಯೋಗ–ಉದ್ಯಮಶೀಲತಾ ಯೋಜನೆ

### (ಬ್ಯಾಂಕುಗಳ ಸಹಯೋಗದಲ್ಲಿ)

➢ ಪರಿಶಿಷ್ಟ ಜಾತಿಯ ನಿರುದ್ಯೋಗಿ ಯುವಕ/ಯುವತಿಯರು ಮೂರು ಚಕ್ರಗಳ ಸರಕು ಸಾಗಾಣಿಕೆ ವಾಹನ, ನಾಲ್ಕು ಚಕ್ರಗಳ ಸರಕು ಸಾಗಾಣಿಕೆ ವಾಹನ, ಸಣ್ಣ ಕೈಗಾರಿಕೆ, ಸೇವಾ ಕ್ಷೇತ್ರ ಮತ್ತು ವ್ಯಾಪಾರಿ ಕ್ಷೇತ್ರಗಳಲ್ಲಿ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ನಿಗಮದ ಸಹಾಯಧನ ಮತ್ತು ಬ್ಯಾಂಕಿನ ಸಾಲ ವ್ಯವಸ್ಥೆಯೊಂದಿಗೆ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ.

1. ಘಟಕ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಠ ರೂ. 2.00 ಲಕ್ಷ ಸಹಾಯಧನ, ಉಳಿದ ಭಾಗ ಬ್ಯಾಂಕ್ ಸಾಲವಾಗಿರುತ್ತದೆ. (ವಾಹನ ಉದ್ದೇಶ ಹೊರತುಪಡಿಸಿ).

2. ಸರಕು ಸಾಗಾಣೆ ವಾಹನ ಉದ್ದೇಶಕ್ಕೆ ಘಟಕ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಠ ರೂ. 3.50 ಲಕ್ಷಗಳ ಸಹಾಯಧನ, ಉಳಿದ ಭಾಗ ಬ್ಯಾಂಕ್ ಸಾಲವಾಗಿರುತ್ತದೆ.

**ಕೈಗೆತ್ತಿಕೊಳ್ಳಬಹುದಾದ ಕೆಲವು ಆರ್ಥಿಕ ಚಟುವಟಿಕೆಗಳು;– (ಉದ್ದೇಶಗಳು)**

- ಚಪ್ಪಲಿ ಅಂಗಡಿ, ಬ್ಯೂಟಿ ಪಾರ್ಲರ್, ಸಾಫ್ಟ್ ಡ್ರಿಂಕ್ಸ್ ಘಟಕ, ದಿನಸಿ/ಸ್ಟೇಷನರಿ ಅಂಗಡಿ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ವಕೀಲರ ಕಛೇರಿ, ಇಲೆಕ್ಟ್ರಿಕಲ್ ಶಾಪ್, ರೆಡಿಮೆಡ್ ಗಾರ್ಮೆಂಟ್ಸ್, ಆಟೋರಿಕ್ಷಾ, ಗೂಡ್ಸ್ ಕ್ಯಾರಿಯರ್, ಪ್ಯಾಸೆಂಜರ್ ಕಾರ್, ಸಿಮೆಂಟ್ ಬ್ರಿಕ್/ಇಟ್ಟಿಗೆ ತಯಾರಿಕೆ, ಹಾಗೂ ಇತರೆ ಯಾವುದೇ ಲಾಭದಾಯಕ ಸಣ್ಣ ಕೈಗಾರಿಕೆ/ಸೇವಾ ಘಟಕ/ವ್ಯಾಪಾರ ಉದ್ದಿಮೆ ಪ್ರಾರಂಭಿಸಲು.

**ಸೌಲಭ್ಯ ಪಡೆಯಲು ಅರ್ಜಿದಾರರಿಗೆ ಇರಬೇಕಾದ ಅರ್ಹತೆಗಳು:–**

- ಅರ್ಜಿದಾರರು ಪರಿಶಿಷ್ಠ ಜಾತಿಗೆ ಸೇರಿದವರಾಗಿರಬೇಕು.
- ಅರ್ಜಿದಾರರು ಕನಿಷ್ಠ ಕಳೆದ 15 ವರ್ಷಗಳಿಂದ ಕರ್ನಾಟಕದಲ್ಲಿ ವಾಸಿಸುತ್ತಿರಬೇಕು.
- ಅರ್ಜಿದಾರರ ವಯಸ್ಸು 18 ರಿಂದ 50 ವರ್ಷಗಳ ಒಳಗಿರಬೇಕು.

- ಅರ್ಜಿದಾರರ ಕುಟುಂಬದ ಸದಸ್ಯರಲ್ಲಿ ಯಾರೊಬ್ಬರೂ ಸರ್ಕಾರಿ ನೌಕರಿಯಲ್ಲಿರಬಾರದು.
- ಅರ್ಜಿದಾರರು/ಕುಟುಂಬದ ಅವಲಂಬಿತ ಯಾವುದೇ ಸದಸ್ಯರು ಈ ಹಿಂದೆ ನಿಗಮ/ ಸರ್ಕಾರದಿಂದ ರೂ.1,00,000/- ಮೇಲ್ಪಟ್ಟು ಸೌಲಭ್ಯ ಪಡೆದಿದ್ದಲ್ಲಿ, ಅಂತಹ ಫಲಾನುಭವಿಗಳು ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.
- ಅರ್ಜಿದಾರರು ಘಟಕವನ್ನು ಸ್ಥಾಪಿಸಲು ಅವಶ್ಯವಿರುವ ಸ್ಥಳಾವಕಾಶವನ್ನು ಹೊಂದಿರಬೇಕು.
- ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನವು ರೂ.1,50,000/- ಗ್ರಾಮೀಣ ಹಾಗೂ ರೂ.2,00,000/- ನಗರ ಪ್ರದೇಶದವರಿಗೆ ಮಿತಿಯೊಳಗಿರಬೇಕು.

## ಆನ್‌ಲೈನ್ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು :-

- ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ
- ಜಾತಿ ಪ್ರಮಾಣ ಪತ್ರ
- ಆದಾಯ ಪ್ರಮಾಣ ಪತ್ರ
- ಪಡಿತರ ಚೀಟಿ
- ಗುರುತಿನ ಚೀಟಿ (ಆಧಾರ್ ಕಾರ್ಡ್/ಚುನಾವಣಾ ಗುರುತಿನ ಚೀಟಿ/ಡ್ರೈವಿಂಗ್‌ಲೈಸನ್ಸ್/ ಪಾನ್‌ಕಾರ್ಡ್/ಭಾವಚಿತ್ರವಿರುವ ಬ್ಯಾಂಕ್ ಪಾಸ್‌ಪುಸ್ತಕ/ಪಾಸ್‌ಪೋರ್ಟ್)
- ವಾಹನ ಉದ್ದೇಶಕ್ಕಾಗಿ ಅರ್ಜಿ ಸಲ್ಲಿಸುವವರು ಖಾಯಂ ಡ್ರೈವಿಂಗ್ ಲೈಸನ್ಸ್ ಹೊಂದಿರಬೇಕು. ಪ್ಯಾಸೆಂಜರ್ ವಾಹನಗಳಿಗೆ ಬ್ಯಾಡ್ಜ್ ಹೊಂದಿರಬೇಕು ಮತ್ತು ವಾಹನದ ಕೊಟೇಷನ್ ಸಲ್ಲಿಸಬೇಕು.
- ಕೃಷಿ ಉದ್ದೇಶಕ್ಕಾಗಿ ಅರ್ಜಿ ಸಲ್ಲಿಸುವವರು ಜಮೀನಿನ ಆರ್.ಟಿ.ಸಿ. ಸಲ್ಲಿಸಬೇಕು
- ಉದ್ದೇಶಿತ ಕಸುಬಿನಲ್ಲಿ ತರಬೇತಿ ಅಥವಾ ಅನುಭವ ಹೊಂದಿದಲ್ಲಿ ಪ್ರಮಾಣ ಪತ್ರ
- ದರಪಟ್ಟಿ ಮತ್ತು ಯೋಜನಾ ವರದಿ

## ಫಲಾನುಭವಿಗಳ ಆಯ್ಕೆ ವಿಧಾನ ಹಾಗೂ ಯೋಜನೆ ಅನುಷ್ಠಾನದ ವಿವಿಧ ಹಂತಗಳು:-

- ಅರ್ಜಿದಾರರು ಈ ಯೋಜನೆಯಡಿ ಸೌಲಭ್ಯ ಪಡೆಯಲು ನಿಗದಿಪಡಿಸಿದ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲವಾದಲ್ಲಿ ಆಯ್ಕೆ ಸಮಿತಿಗೆ ಅರ್ಜಿಯನ್ನು ಮಂಡಿಸಲಾಗುವುದಿಲ್ಲ.
- ಸ್ವೀಕರಿಸಿದ ಅರ್ಜಿಗಳನ್ನು ವಿಧಾನಸಭಾ ಕ್ಷೇತ್ರವಾರು ಪಟ್ಟಿ ಮಾಡಿ, ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿ ಸಭೆಗೆ ಮಂಡಿಸಲಾಗುವುದು.
- ಮಹಿಳೆಯರಿಗೆ ಶೇ. 33.33 ಹಾಗೂ ಅಂಗವಿಕಲರಿಗೆ ಶೇ.3ರಷ್ಟು ಮೀಸಲಾತಿ ಅನ್ವಯ ಆಯ್ಕೆ ಮಾಡಲಾಗುವುದು.
- ಆಯ್ಕೆ ಸಮಿತಿಯಿಂದ ಆಯ್ಕೆಯಾದ ಬಗ್ಗೆ ಅರ್ಜಿದಾರರಿಗೆ ಅಂಚೆ/ಎಸ್.ಎಮ್.ಎಸ್ ಮೂಲಕ ತಿಳಿಸಲಾಗುವುದು ಅಥವಾ ಅರ್ಜಿದಾರರೇ ನೇರವಾಗಿ ನಿಗಮದ ಅಂತರ್ಜಾಲ ತಾಣದಲ್ಲಿ ಅರ್ಜಿ ಸಂಖ್ಯೆ ದಾಖಲಿಸಿ ತಿಳಿದುಕೊಳ್ಳಬಹುದು.

- ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲ್ಪಟ್ಟ ಅರ್ಜಿದಾರರ ಸ್ಥಳ ಪರಿಶೀಲನೆ ಮಾಡಿ ಅರ್ಹರಿರುವ ಕುರಿತು ಜಿಲ್ಲಾ ಕಛೇರಿಗೆ ವರದಿ ಸಲ್ಲಿಸುವರು.
- ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅರ್ಹರೆಂದು ವರದಿ ಸಲ್ಲಿಸಿದ ಅರ್ಜಿದಾರರು ಮೂಲ ದಾಖಲೆಗಳನ್ನು ಜಿಲ್ಲಾ ಕಛೇರಿಗೆ ಹಾಜರುಪಡಿಸಿ ಜಿಲ್ಲಾ ವ್ಯವಸ್ಥಾಪಕರಿಂದ ಧೃಢೀಕರಿಸಿದ ನಂತರ ಅರ್ಜಿಗಳನ್ನು ಫಲಾನುಭವಿಗಳು ಸೂಚಿಸಿದ ಬ್ಯಾಂಕ್ ಶಾಖೆಗಳಿಗೆ ಸಾಲ ಮಂಜೂರಾತಿಗೆ ಕಳುಹಿಸಿ ಫಲಾನುಭವಿಗಳಿಗೆ ಅಂಚೆ/ಎಸ್.ಎಮ್.ಎಸ್ ಮೂಲಕ ಮಾಹಿತಿ ಕೊಡಲಾಗುವುದು. ಅಥವಾ ಅರ್ಜಿದಾರರೇ ನೇರವಾಗಿ ನಿಗಮದ ಅಂತರ್ಜಾಲ ತಾಣದಲ್ಲಿ ಅರ್ಜಿ ಸಂಖ್ಯೆ ದಾಖಲಿಸಿ ತಿಳಿದುಕೊಳ್ಳಬಹುದು.
- ಅರ್ಜಿದಾರರು ಪ್ರಾರಂಭಿಸಲು ಉದ್ದೇಶಿಸಿರುವ ಘಟಕದ ಸ್ಥಾಪನೆಯ ಸಾಧ್ಯತೆ ಮತ್ತು ಆರ್ಥಿಕ ಸಿಂಧುತ್ವ ಆಧರಿಸಿ ಸಾಲ ಮಂಜೂರಾತಿ ನೀಡುವುದು ಆಯಾ ಬ್ಯಾಂಕಿನ ವ್ಯವಸ್ಥಾಪಕರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಬ್ಯಾಂಕ್ ವ್ಯವಸ್ಥಾಪಕರು ವಿನಾ ಕಾರಣ ಅರ್ಜಿ ತಿರಸ್ಕರಿಸಿದಲ್ಲಿ, ನಿಗಮವು ಸೂಕ್ತ ಮಟ್ಟದಲ್ಲಿ ವ್ಯವಹರಿಸಿ ಫಲಾನುಭವಿಗೆ ನ್ಯಾಯ ಒದಗಿಸಲು ಸಹಕರಿಸುವುದು.
- ಬ್ಯಾಂಕ್‌ಗಳಿಂದ ಸಾಲ ಮಂಜೂರು ಮಾಡಿ ಸಹಾಯಧನ್ ಬಿಡುಗಡೆ ಕೋರಿ ನಿಗದಿತ ನಮೂನೆಯಲ್ಲಿ ಬ್ಯಾಂಕ್ ಶಾಖೆಗಳ ವ್ಯವಸ್ಥಾಪಕರು ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸುವರು.
- ನಿಗಮದಿಂದ ಸಂಬಂಧಿಸಿದ ಬ್ಯಾಂಕ್ ಶಾಖೆಗಳಿಗೆ ನಿಯಮಾನುಸಾರ ಸಹಾಯಧನ ಬಿಡುಗಡೆ ಮಾಡಲಾಗುವುದು.
- ಬ್ಯಾಂಕ್ ವತಿಯಿಂದ ಮಂಜೂರು ಮಾಡಿದ ಸಾಲದ ಮೊತ್ತದೊಂದಿಗೆ ನಿಗಮದಿಂದ ಬಿಡುಗಡೆ ಮಾಡಿದ ಸಹಾಯಧನ ಮೊಬಲಗನ್ನು ಒಟ್ಟಿಗೆ ಸೇರಿಸಿ ಉತ್ಪಾದಕ ಘಟಕವನ್ನು ಸ್ಥಾಪಿಸಲು ಫಲಾನುಭವಿಗೆ/ಸರಬರಾಜುದಾರರಿಗೆ ಸಂಬಂಧಿಸಿದ ಬ್ಯಾಂಕ್ ಶಾಖೆಯು ಬಿಡುಗಡೆ ಮಾಡುತ್ತದೆ.
- ಫಲಾನುಭವಿಯು ಉತ್ಪಾದಕ ಘಟಕವನ್ನು ಸ್ಥಾಪಿಸಿ ನಿಗಮಕ್ಕೆ ಮಾಹಿತಿ ನೀಡುವುದು.
- ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ನಿಗಮದ ಸಹಾಯಧನ್ ಹಾಗೂ ಬ್ಯಾಂಕ್ ಸಾಲವನ್ನು ನಿಗದಿತ ಉದ್ದೇಶಕ್ಕೆ ಫಲಾನುಭವಿಯು ಬಳಕೆ ಮಾಡಿ ಉತ್ಪಾದಕ ಘಟಕ ಪ್ರಾರಂಭಿಸಿರುವ ಕುರಿತು ಸ್ಥಳ ಪರಿಶೀಲನಾ ವರದಿಯನ್ನು ಪೋಟೋ ಸಮೇತ ಜಿಲ್ಲಾ ಕಛೇರಿಗೆ ಸಲ್ಲಿಸುವರು.
- ನಿಗಮದಿಂದ ಬಿಡುಗಡೆ ಮಾಡಲಾದ ಸಹಾಯಧನ/ಬೀಜಧನವನ್ನು ನಿಗದಿತ ಉದ್ದೇಶಕ್ಕೆ ವಿನಿಯೋಗಿಸಿರುವ ಕುರಿತು ಬ್ಯಾಂಕ್ ವ್ಯವಸ್ಥಾಪಕರಿಂದ ಸಹಾಯಧನ/ಬೀಜಧನ ವಿನಿಯೋಗ ಪ್ರಮಾಣ ಪತ್ರ ಪಡೆಯುವುದು.